ಕೊಂಬೆಯನ್ನು ಮುರಿದು ತಿಂದಿದ್ದೆ. ಬಹಳ ರುಚಿಯಾದ ಶ್ರೀಗಂಧದ ಕುಡಿ ನನಗೆ ಮತ್ತೆ ತಿನ್ನಲು ಸಿಗಲಿಲ್ಲ. ಒಂದು ವರ್ಷ ತಾಯಿಯ ಹಾಲು ಕುಡಿದು ದಷ್ಟಪುಷ್ಟವಾಗಿಯೇ ಬೆಳೆದ ನಾನು, ಕೋಂಪ್ಲಾನ್ ಕುಡಿಯದೇ ಎಂಟು ಅಡಿ ಎತ್ತರ ಬೆಳೆದೆ, ಬೋರ್ನ್‌ವಿಟಾ ಕುಡಿಯದೇ ಸಾವಿರ ಕೆ.ಜಿ. ತೂಗಿದೆ.

ಈಗ್ಗೆ ಎರಡು ವರ್ಷದ ಹಿಂದೆ ಬೆದೆಗೆ ಬಂದ ಹೆಣ್ಣಿಗೋಸ್ಕರ ನನಗೂ ಹಾಗೂ ಇನ್ನೊಬ್ಬ ನನ್ನಂತೆ ಇರುವವನಿಗೂ ಮಂಚಾಲೆ ಕಾಡಿನಲ್ಲಿ ಜಿದ್ದಾಜಿದ್ದಿ ಕಾಳಗ ನಡೆಯಿತು. ನಮ್ಮಿಬ್ಬರ ಕಾದಾಟದಲ್ಲಿ ಅಡವಿಯಲ್ಲಿ ದೂಳು ಆಕಾಶದೆತ್ತರಕ್ಕೆ ಏರಿತ್ತು. ಬೆದೆಗೆ ಬಂದ ಹೆಣ್ಣುಕಾಟಿ ಯಾರಿಗೆ ಸೇರಬೇಕು ಎಂಬುದು ತೀರ್ಮಾನವಾಗಲು ನಮ್ಮ ನಡುವೆ ಕಾಳಗ ನಡೆಯಬೇಕು. ಇದು ಪ್ರಕೃತಿ ನಮಗೆ ನೀಡಿದ ಮಿತಿಯೆನ್ನಿ. ಬಲಿಷ್ಠವಾದ ಸಂತತಿ ಜನಿಸಬೇಕೆಂದರೆ, ಬಲಿಷ್ಠವಾದ ಗಂಡನ್ನು ಕೂಡಬೇಕಲ್ಲವೇ? ನನಗೇನು ಆತನ ಮೇಲೆ ದಾಯಾದಿ ಮತ್ಸರವಿರಲಿಲ್ಲ. ನಾನು ಕೂಡಲು ಬಯಸುವ ಹೆಣ್ಣುಕಾಟಿಯ ಮೇಲೆ ಅವನು ಕಣ್ಣು ಹಾಕಿದ್ದು, ನನಗೆ ಸಿಟ್ಟು ತರಿಸಿತು. ಕಾಳಗ ಸುಮಾರು ಒಂದು ಗಂಟೆಯ ಹೊತ್ತು ನಡೆಯಿತು. ಓಡಿಬಂದು ಆತನ ತಲೆಗೆ ಢೀ ಕೊಟ್ಟೆ ನೋಡಿ, ಎರಡು ಅಡಿ ಹಿಂದೆ ಸರಿದ. ಆದರೂ ಅವನು ಸೋಲೊಪ್ಪಿಕೊಳ್ಳಲು ತಯಾರಿರಲಿಲ್ಲ. ನನ್ನ ಕೋಡು ಈಗಿನಷ್ಟು ದೊಡ್ಡದಾಗಿ ಬೆಳೆದಿರಲಿಲ್ಲವಾದರೂ, ಕೋಡಿನ ತುದಿ ಭರ್ಜಿಯಂತೆ ಚೂಪಾಗಿತ್ತು. ನನಗೇನು ಅವನನ್ನು ಸಾಯಿಸಬೇಕು ಅಥವಾ ಅವನ ಜೀವನ ಹಾಳುಮಾಡಬೇಕು ಎಂದಿರಲಿಲ್ಲ. ಕಾಳಗ ಮುಂದುವರೆಯಿತು.

ನಮ್ಮ ಗುಂಪಿನ ಉಳಿದ ಸದಸ್ಯರು ದಿಗ್ಭ್ರಾಂತರಾಗಿ ಕಾಳಗವನ್ನು ನೋಡುತ್ತಿದ್ದರು. ಈ ಯುದ್ಧವನ್ನು ಗೆದ್ದರೆ ಮಾತ್ರ ನನ್ನ ಗೌರವ ಉಳಿಯುತ್ತಿತ್ತು. ಇಬ್ಬರೂ ಸಾಕಷ್ಟು ಸುಸ್ತಾಗಿದ್ದೆವು. ಮೂಗಿನ ಹೊಳ್ಳೆಯನ್ನು ಹಿಗ್ಗಿಸಿ, ಹತ್ತು ಹೆಜ್ಜೆ ಹಿಂದೆ ಹೋಗಿ ಮತ್ತೆ ತಿರುಗಿ ರಭಸದಿಂದ ಓಡಿ ಬಂದು ಎದುರಾಳಿಯ ಹಣೆಗೆ ಢೀ ಕೊಟ್ಟೆ, ಅದೇ ಹೊತ್ತಿಗೆ ಎದುರಾಳಿ ಭಯದಿಂದ ಮುಖ ತಿರುಗಿಸಿದ. ನನ್ನ ಚೂಪಾದ ಕೋಡು ಅವನ ಬಲಗಣ್ಣನ್ನು ನೇರ ಪ್ರವೇಶಿಸಿತು. ರಕ್ತ ಬಸಿಯಿತು. ಕಣ್ಣಿಗೆ ಪೆಟ್ಟು ಬಿದ್ದ ಕಾರಣಕ್ಕೆ ಮತ್ತೆ ಎಡಕ್ಕೆ ಮುಖ ತಿರುಗಿಸಿದ ಅವನ ಎಡಗಣ್ಣಿಗೂ ನನ್ನ ಕೋಡು ತಗುಲಿತು. ದಿಕ್ಕೇ ತೋಚದ ಆತ ಆಯತಪ್ಪಿ ಬಿದ್ದ. ಅಲ್ಲಿಗೆ ಯುದ್ಧ ಮುಗಿಯಿತು. ನಾನು ನಿರಾತಂಕವಾಗಿ ಹೆಣ್ಣನ್ನು ಕೂಡಿದೆ.

ಎದುರಾಳಿ ಎದ್ದು ನಿಂತು ಓಡಲು ನೋಡಿದ. ದಿಕ್ಕು ತಪ್ಪಿ ಹೋಗಿ ಕಲ್ಲುಕ್ವಾರಿಯಲ್ಲಿ ಬಿದ್ದ. ಅಲ್ಲಿಗೆ ಆತನ ಕಥೆ ಮುಗಿದ ಹಾಗೆ. ಅದರಲ್ಲಿ ನನ್ನ ತಪ್ಪೇನೂ ಇಲ್ಲ.

ನಮ್ಮ ಹದಿನಾಲ್ಕು ಸದಸ್ಯರ ಗುಂಪಿಗೆ ಅಮ್ಮನೇ ನಾಯಕಿಯಾಗಿದ್ದಳು. ಬೆದೆ ಬಂದ ಹೆಣ್ಣನ್ನು ಕೂಡಲು ನಾನು ನನ್ನ ಗುಂಪಿನಿಂದ ತಾತ್ಕಾಲಿಕವಾಗಿ ಬೇರೆಯಾಗಿದ್ದೆ. ಈಗ ಮತ್ತೆ ನನ್ನ ಗುಂಪನ್ನು ಸೇರಿಕೊಂಡೆ.

ಅಂಬಾರುಗೋಡ್ಲಿನಿಂದ, ಕೈವಾರ, ಹುಲಿದೇವರ ಬನ, ಗೆಣಸಿನಕುಣಿ, ಆವಿನಹಳ್ಳಿಯ ಮಾರ್ಗವಾಗಿ ಬಂದು ಕಾಗೆಹಳ್ಳ, ಹೊಸೂರು, ಮೇಲಿನಮನೆ, ಸುಳ್ಮನೆ, ಲಿಂಗದಹಳ್ಳಿಗೆ ಬರಲು ನಮಗೆ ಹತ್ತು ದಿನಗಳು ಬೇಕು. ಕಾಡಿನ ಸೊಪ್ಪನ್ನು ತಿನ್ನುತ್ತಾ, ಹಗಲಿನಲ್ಲಿ ವಿಶ್ರಾಂತಿ ಪಡೆಯುತ್ತಾ, ಹೂಳು ತುಂಬಿದ ಕೆರೆಗಳಲ್ಲೇ ಲಭ್ಯವಿರುವ ನೀರನ್ನು ಕುಡಿಯುತ್ತಾ ಬರುತ್ತೇವೆ. ಆದರೆ, ಈಗ ಮನುಷ್ಯರು ಎಲ್ಲಿ ನೋಡಿದರೂ ಬೇಲಿ ಹಾಕಿಕೊಂಡಿದ್ದಾರೆ. ಆರಡಿಯಷ್ಟು ತಂತಿ ಬೇಲಿಯನ್ನು ನಮ್ಮ ವಯಸ್ಸಿನ ಮಕ್ಕಳು ಬೇಲಿಗೆ ಕಾಲು ತಾಗಿಸದಂತೆ ನಿಂತಲ್ಲಿಂದಲೇ ಜಿಗಿದುಬಿಡುತ್ತಾರೆ. ನಾವು ಎಷ್ಟೇ ವಜ್ಜೆಯಿದ್ದರೂ ನಮಗೆ ಮನುಷ್ಯರು ಹಾಕುವ ಸಾಮಾನ್ಯ ಬೇಲಿ ತಡೆಯುವುದಿಲ್ಲ. ಜಾನುವಾರು ದಾಟಬಾರದು ಎಂದು ತೆಗೆಯುವ ಅಗಳವನ್ನು ಲೀಲಾಜಾಲವಾಗಿ ಜಿಗಿದುಬಿಡುತ್ತೇವೆ. ನಾವು ಬಲಿಷ್ಠವೇ ಹೊರತು ಬೊಜ್ಜಲ್ಲ.


ಪ್ರಕೃತಿ ದೇವಿ ನೀಡಿದ
ಸಿಕ್ಸ್ ಪ್ಯಾಕ್ ದೇಹ
ನೆಲಕ್ಕುರುಳಿದಾಗ...

ನಮ್ಮದು ದೊಡ್ಡ ಹೊಟ್ಟೆ. ತಿನ್ನಲು ಬಹಳ ಬಹಳ ಸೊಪ್ಪು–ಹುಲ್ಲು ಬೇಕು. ಸಾಕಿದ ಜಾನುವಾರುಗಳು ಬರಗೆಟ್ಟಂತೆ ತಿನ್ನುವ ಪ್ಲಾಸ್ಟಿಕ್ಕುಗಳು ನಮಗೆ ವರ್ಜ್ಯ. ಕಾಡಿನಲ್ಲಿ ಆಹಾರ ಸಿಗದಿದ್ದರೆ ನಾವು ಅನಿವಾರ್ಯವಾಗಿ ಮನುಷ್ಯ ಆಕ್ರಮಿತ ಜಾಗಕ್ಕೆ ನುಗ್ಗುತ್ತೇವೆ. ಹತ್ತಡಿ ಎತ್ತರದಿಂದ ಜಾರಿಕೊಂಡು ತೋಟ ಇಳಿಯುತ್ತೇವೆ. ಇಲ್ಲಿನ ರೈತರು ನಮ್ಮನ್ನು ಬೆದರಿಸಲು ಗರ್ನಾಲು ಹೊಡೆಯುತ್ತಾರೆ. ತಾವು ಆಕ್ರಮಿಸಿಕೊಂಡು ಕುಳಿತ ಜಾಗಕ್ಕೆ ನಾವುಗಳು ನುಗ್ಗದಂತೆ ಐಬ್ಯಾಕ್ಸ್ (ಕರೆಂಟ್) ಬೇಲಿ ನಿರ್ಮಿಸುತ್ತಾರೆ. ಹೊಟ್ಟೆ ಹಸಿವು ಕೇಳಬೇಕಲ್ಲ; ಜೀವದ ಹಂಗು ತೊರೆದು ತೋಟಕ್ಕೆ ಹೋಗಿ ಅವರು ನೆಟ್ಟ ಅಡಿಕೆ ಸಸಿಯನ್ನೂ, ಬಾಳೆಗಿಡಗಳನ್ನು ಮುರಿದು ತಿನ್ನುತ್ತೇವೆ. ಇದು ಅವರಿಗೆ ಮತ್ತಷ್ಟು ಸಿಟ್ಟು ತರಿಸುತ್ತದೆ. ಹೆಂಗಸರು ಉಟ್ಟು ಬಿಟ್ಟ ಸೀರೆಯನ್ನು, ಪ್ಲಾಸ್ಟಿಕ್ಕಿನಿಂದ ತಯಾರಿಸಿದ ಶೀಟುಗಳನ್ನು ನಾವು ಬರದ ಹಾಗೆ ಅಡ್ಡ ಕಟ್ಟಿಡುತ್ತಾರೆ. ಒಳಗೆ ಏನಿದೆ ಎಂದು ನಮಗೆ ಕಾಣುವುದಿಲ್ಲ. ಒಂದೊಮ್ಮೆ ಹೊಂಡ ಗುಂಡಿಗಳಿದ್ದರೆ, ನಮ್ಮ ಕಾಲು ಮುರಿಯುವುದು ನಿಶ್ಚಿತ. ಅಂತಹ ತೋಟಗಳಿಗೆ ನಾವು ಹೋಗುವುದಿಲ್ಲ. ಈ ಪಟ್ಟುಗಳನ್ನೆಲ್ಲಾ ನಾನು ಎಳೆಗರುವಿದ್ದಾಗ, ಅಮ್ಮನ ಹಾಲು ಕುಡಿಯುತ್ತಲೇ ಕಲಿತದ್ದು.

ನಾವು ತಿರುಗಾಡುವ ಪ್ರದೇಶದಲ್ಲಿ ಅಕೇಶಿಯಾವನ್ನು ಹೇರಳವಾಗಿ ಸರ್ಕಾರಗಳೇ ಬೆಳೆಸಿವೆ. ಅದು ನಮಗೆ ತಿನ್ನಲು ಯೋಗ್ಯವಾದ ಸಸಿಯಲ್ಲ. ಅತ್ತ ಸರ್ಕಾರಗಳು ಅಭಿವೃದ್ಧಿಯ ಹೆಸರಿನಲ್ಲಿ ಜಲಾಶಯಗಳನ್ನು, ಹೆದ್ದಾರಿಗಳನ್ನು ನಿರ್ಮಿಸಿದರು, ಬೇಕಾಬಿಟ್ಟಿ ಗ್ರಾನೈಟ್ ಗಣಿಗಾರಿಕೆಗೆ ಅನುಮತಿ ನೀಡಿದರು; ಜಲ್ಲಿಕಲ್ಲು ಮಾಫಿಯಾದವರು ಸರ್ಕಾರದ ಅನುಮತಿ ಪಡೆಯದೇ ಮತ್ತಷ್ಟು ಅಕ್ರಮ ಕ್ವಾರಿಗಳನ್ನು ಮಾಡಿಕೊಂಡು ಹಗಲು ರಾತ್ರಿಯೆನ್ನದೇ ಡೈನಮೈಟ್ ಸಿಡಿಸಿ, ನಮ್ಮ ನೆಲೆಯನ್ನು ಹಾಳು ಮಾಡಿದರು. ಹೀಗೆ ಸರ್ಕಾರ ಮತ್ತು ಸಾರ್ವಜನಿಕರು ಸೇರಿಕೊಂಡು ನಾವಿರುವ ಪ್ರದೇಶಗಳನ್ನು ಆಕ್ರಮಿಸಿಕೊಂಡರೆ, ನಾವೆಲ್ಲಿಗೆ ಹೋಗಬೇಕು? ನಾವು ಮನುಷ್ಯರ ಹಾಗಲ್ಲ; ಆ ಕ್ಷಣಕ್ಕೆ ಹೊಟ್ಟೆ ತುಂಬಿದರಾಯಿತು. ಬಕೇಟುಗಟ್ಟಲೆ ನೀರು ಕುಡಿದು ಮರದಡಿಯಲ್ಲಿ ಬಿದ್ದುಕೊಳ್ಳುತ್ತೇವೆ. ಹಗಲಿನ ಹಕ್ಕಿಗಳಾದ ಮೈನಾ, ಬೆಳ್ಳಕ್ಕಿ, ಕಾಗೆಗಳು ಬಂದು ನಮ್ಮ ಮೈಯಲ್ಲಿನ ಉಣ್ಣೆಗಳನ್ನು ತಿಂದು ತಮ್ಮ ಹೊಟ್ಟೆ ತುಂಬಿಸಿಕೊಳ್ಳುತ್ತವೆ. ನಾವು ಬರೀ ಸಾವಯವ ಸೊಪ್ಪನ್ನೇ ತಿನ್ನುವುದರಿಂದ, ನಮ್ಮಿಂದ ಸಿಗುವ ಸಗಣಿಯೂ ಸಾರಭರಿತವಾಗಿಯೇ ಇರುತ್ತವೆ. ಹಚ್ಚಹಸುರಿನ ಒಂದು ಬುಟ್ಟಿಯಷ್ಟು ಸಗಣಿಯನ್ನು ನಾವು ವಯಸ್ಕರು ಹೊರಗೆ ಹಾಕುತ್ತೇವೆ. ಸಾರಭರಿತ ಸಗಣಿಯ ಸಾರವು ಕಾಡು ಮತ್ತಷ್ಟು ಮೈದುಂಬಿಕೊಳ್ಳಲು ಕಾರಣವಾಗುತ್ತದೆ. ಇದು ನಮ್ಮಿಂದಾಗುವ ನೈಸರ್ಗಿಕ ಸೇವೆ.

ನಮ್ಮ ಪ್ರದೇಶಗಳನ್ನು ಒತ್ತುವರಿ ಮಾಡಿ ನಮಗೆ ಬದುಕಲು ಜಾಗವಿಲ್ಲದಂತೆ ಮಾಡುವ